AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ದೇಶಿ ಅನುಭವ ಸಾಹಿತ್ಯದ ವಸ್ತುವಾಗಬೇಕು

(ಕರ್ವಾಲೊ ಕಾದಂಬರಿಯನ್ನು ಅನುಲಕ್ಷಿಸಿ)

**ರವಿಚಂದ್ರ**
ಸಂಶೋಧನಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ – 583 276
ravichandrabk1519@gmail.com

ಭಾರತದ ಸ್ವಾತಂತ್ರ್ಯ ನಂತರದ ಕಾಲದಲ್ಲಿ ಆಧುನಿಕತೆಯ ಪ್ರಭಾವದಿಂದ ಹಾಗೂ ಇಂಗ್ಲಿಷ್ ಪ್ರಭಾವದಿಂದ ಜ್ಞಾನವೇ ಶ್ರೇಷ್ಠ ಹಾಗೂ ಆ ಜ್ಞಾನವು ಇಂಗ್ಲಿಷ್ ಸಾಹಿತ್ಯದ ಮೂಲಕವೆ ದೊರೆಯುತ್ತದೆ. ಹಾಗೂ ಇಂಗ್ಲಿಷ್ ಮೂಲಕವೆ ಪಡೆಯಬೇಕು ಎಂಬ ಮನೋಭಾವನೆಗೆ ವಿರುದ್ಧವಾಗಿ ನವೋತ್ತರ ಕಾಲಘಟ್ಟದಲ್ಲಿ ಸ್ಥಳೀಯ ದೇಶಿ ಅನುಭವಗಳು ಸಹ ಶ್ರೇಷ್ಠ ಅವುಗಳ ಮೂಲಕ ನಾವು ಸಾಹಿತ್ಯವನ್ನು ನೋಡಬೇಕು ಹಾಗೂ ಅದರಲ್ಲಿಯ ಅನುಭವದ ಜ್ಞಾನದ ಮಹತ್ವವನ್ನು ಎಲ್ಲರಿಗೂ ತೋರಿಸಬೇಕು, ಆ ಅನುಭವದ ಜ್ಞಾನವು ಸಾಹಿತ್ಯದ ವಸ್ತುವಾಗಬೇಕು ಎಂಬ ಪರಿಕಲ್ಪನೆಗಳು ಕನ್ನಡದಲ್ಲಿ ಉಂಟಾದವು.

ಪ್ರಸ್ತುತ ಲೇಖನದಲ್ಲಿ ಪುಸ್ತಕ ಜ್ಞಾನವನ್ನು (ಆಲೋಚನೆಯೆಂಬುದನ್ನು) ಶಿಷ್ಟವಾಗಿ ಹಾಗೂ ಅನುಭವವನ್ನು ದೇಶಿಯಾಗಿಯೂ (ಜಾನಪದವಾಗಿಯೂ) ನೋಡಲಾಗಿದೆ. ಪ್ರಮುಖವಾಗಿ ಈ ಲೇಖನದ ಉದ್ದೇಶ ಮೂರ್ತ–ಅಮೂರ್ತ, ಚಿಂತನೆ– ಅನುಭವ ಇವು ಪರಸ್ಪರ ಒಂದಾಗಬೇಕು ಎಂಬ ಹಿನ್ನೆಲೆಯಲ್ಲಿ ಚಿಂತನೆಯ ಬದುಕು ಅನುಭವದಿಂದಲೂ, ಅನುಭವದ ಬದುಕು ಚಿಂತನೆಯಿಂದಲೂ ಪುಷ್ಟಿ ಪಡೆಯಬೇಕು ಎನ್ನುವ ಉದ್ದೇಶದಿಂದ ಈ ಲೇಖನವನ್ನು ನೋಡುವ ಪ್ರಯತ್ನ ಮಾಡಲಾಗಿದೆ. ಈ ಹಿನ್ನಲೆಯಲ್ಲಿ ಅನಂತಮೂರ್ತಿಯವರ ಹೇಳಿಕೆ ಬಹಳ ಪ್ರಮುಖವಾಗಿದೆ, ಗಮನಿಸಬಹುದಾದರೆ "ಬರಿಯ ಶೂದ್ರ ಪ್ರಜ್ಞೆಯಿಂದ ಜನಪದ ಸಾಹಿತ್ಯ ಸೃಷ್ಟಿಯಾಗುತ್ತದೆ. ಬರಿಯ ಬ್ರಾಹ್ಮಣ ಪ್ರಜ್ಞೆಯಿಂದ ನಿರ್ವೀರ್ಯವಾದ, ನಯನಾಜೂಕಿನ ಸ್ನಾಯುಶಕ್ತಿಹೀನವಾದ ಸಾಹಿತ್ಯ ಹೊರಬರುತ್ತದೆ. ಆದರೆ ಇವೆರಡೂ ಕೂಡಿದಾಗ ಮಾತ್ರ ಅಖಂಡ ಪ್ರಜ್ಞೆಯ ಸಾಹಿತ್ಯ ಸಾಧ್ಯವಾಗುತ್ತದೆ" ಎಂಬುದು ಬಹಳ ಮುಖ್ಯವಾದ ಅಂಶವಾಗಿದೆ, ಈ ಹಂತದಲ್ಲಿ ಚಿಂತನೆ ಮತ್ತು ಅನುಭವ, ಶಿಷ್ಟ ಮತ್ತು ಜನಪದ, ಇಂಗ್ಲಿಷ್ ಮತ್ತು ಕನ್ನಡ, ಬ್ರಾಹ್ಮಣ ಚಿಂತನೆಗಳು ಮತ್ತು ಶೂದ್ರನ ಮಣ್ಣಿನ ಅನುಭವಗಳು ಪರಸ್ಪರ ಒಂದಾದಾಗಾ ಬದುಕಿಗೊಂದು ವಿಶಿಷ್ಟ ಶಕ್ತಿ ದೊರಕುತ್ತದೆ. ಇದರಿಂದ ಬೆಳೆಯುವ ಸಾಹಿತ್ಯ ವಿಶಿಷ್ಟವಾಗಿರಬಲ್ಲದು ಎಂಬ ವಿಶಿಷ್ಟ ಕ್ರಮವೊಂದು ನವ್ಯ ಘಟ್ಟದಲ್ಲಿ ಬೆಳೆಯಿತು. ಮುಂದೆ ನವೋತ್ತರದ ಹಲವಾರು ಕಥೆ, ಕಾದಂಬರಿಯ ವಸ್ತುವಾಯಿತು.

ಜಾನಪದ ಸಾಹಿತ್ಯವನ್ನು ನಾವು ಅನಾದಿ ಕಾಲದಿಂದಲೂ ನಿರ್ಲಕ್ಷ್ಯ ಮಾಡುತ್ತಾ ಬಂದಿದ್ದೇವೆ. ಆದರೆ ಪ್ರಸ್ತುತ ಆಧುನಿಕತೆಯ ಕಾಲದಲ್ಲಿ ಜಾನಪದ ಸಂಪತ್ತಿನ ಸಂಪರ್ಕದಿಂದ ಉಚ್ಚ ನಾಗರಿಕತೆಗೆ ರಕ್ತದಾನವಾಗಬೇಕು, ಇಂಗ್ಲಿಷ್ ಸಾಹಿತ್ಯಕ್ಕೂ ಈ ರೀತಿಯ ರಕ್ತದಾನ ಜಾನಪದ ಸಾಹಿತ್ಯದಿಂದ ಆಗಬೇಕು ಮತ್ತು ಇಂಗ್ಲಿಷ್ ಭಾಷೆಯ ಜ್ಞಾನವನ್ನು ನಾವು ಜಾನಪದಕ್ಕೂ ತರಬೇಕಾದ ಅವಶ್ಯಕತೆ ಇದೆ ಎಂಬುದನ್ನು ಅನಂತಮೂರ್ತಿಯವರ ಹೇಳಿಕೆಯಲ್ಲಿ ಗಮನಿಸುವುದಾದರೆ "ಜಾನಪದ ಸಂಪತ್ತಿನಿಂದ ಭಾಷೆಯ ಕಸುವನ್ನು ಪಡೆದವು, ಸಾಹಿತ್ಯಕ್ಕೊಂದು ಭಾಷೆಯನ್ನು ಸೃಷ್ಟಿಸಿಕೊಂಡೆವು. ಆದರೆ ಜಾನಪದದಿಂದ ನಾವು ಪಡೆದುದೆಷ್ಟು? ಕೊಟ್ಟದ್ದೆಷ್ಟು? ಇಂಗ್ಲಿಷ್ ಭಾಷೆಯ ಮೂಲಕ ಹಿಗ್ಗಿದ ನಮ್ಮ ವಿಚಾರಗಳನ್ನು ಜಾನಪದ ಜೀವನಕ್ಕೆ ನಾವು ಒಯ್ಯುತ್ತಿಲ್ಲ, ಅದಕ್ಕೆ ತಕ್ಕ ಭಾಷೆ ನಮ್ಮಲ್ಲಿಲ್ಲ, ಅಂದರೆ ನಮ್ಮ ಬುದ್ಧಿಜೀವಿಗಳು ಬಂಜೆಯರು, ನಾವು ಪರಭಾಷೆಗಳಿಂದ ಪಡೆದದ್ದನ್ನು ನಮ್ಮ ಜನಕ್ಕೆ ಒಯದ್ದೇ ಆದರೆ ಜಾನಪದ ಜೀವನದಲ್ಲಿ ಅದು ಅನುಭವವಾಗಿ ಹೊಸ ರೂಪ ತಾಳಿ ತಿರುಗಿ ನಮಗೆ ಸಿಗುವುದು ಸಾಧ್ಯ. ಆದರೆ ನಮ್ಮ ಜೀವನ, ನಮ್ಮ ವಿಚಾರ ನಮ್ಮ ಭಾಷೆಗಳ ನಡುವೆ ಯಾವ ಅನ್ಯೋನ್ಯತೆಯೂ ಇಲ್ಲ. ನಾವು ಪಾಶ್ಚಿಮಾತ್ಯ ಸಂಸ್ಕೃತಿಯ ಸಂಪರ್ಕದಿಂದ ಪಡೆದದ್ದಷ್ಟನ್ನು ನಮ್ಮ ಜನರ ಜೀವನದ ವಸ್ತುಗಳನ್ನಾಗಿ ಮಾಡಿದ್ದೇವೆ ಎನ್ನುವುದರ ಜೊತೆಗೆ ಕುಮಾರವ್ಯಾಸ, ಪಂಪ, ಬಸವಣ್ಣ ಇತ್ಯಾದಿ ಜನರು ಸಂಸ್ಕೃತದಲ್ಲಿದ್ದ ವಿಚಾರಗಳನ್ನು ಕಾವ್ಯವನ್ನು ತಮ್ಮ ನಿತ್ಯ ಜೀವನದ ಸೊತ್ತಾಗಿ ಹೇಗೆ ಮಾಡಿದರು ಎಂಬುದನ್ನು ಹೋಲಿಸಿ ನೋಡಿದರೆ ನಾವು ತಲೆ ತಗ್ಗಿಸಬೇಕಾಗುತ್ತದೆ".1 ಅದಕ್ಕೆ ನಾವು ಇಂಗ್ಲಿಷ್ ಸಾಹಿತ್ಯದ ಜ್ಞಾನವನ್ನು ಕನ್ನಡದ ಜಾನಪದಕ್ಕೆ ತಂದು ಬೆಳಸಬೇಕಾದ ಅವಶ್ಯಕತೆ ಇದೆ ಎಂಬುದನ್ನು ಮೇಲಿನ ಹೇಳಿಕೆಯಿಂದ ತಿಳಿಯಬಹುದಾಗಿದೆ ಅದಕ್ಕೆ ಪೂರಕವೆಂಬತೆ ತೇಜಸ್ವಿಯವರು ಕರ್ವಾಲೊದಲ್ಲಿ ಇಂಗ್ಲಿಷ್ ಜ್ಞಾನಕ್ಕೆ ನಮ್ಮ ಜಾನಪದ(ಅನುಭವ) ಸಂಪತ್ತು ಸಹಾ ಶ್ರೇಷ್ಠವಾಗಿದೆ ಹಾಗೂ ಎರಡು ಜ್ಞಾನಶಾಖೆಯಿಂದ ನಾವು ಹೊಸ ಸಾಹಿತ್ಯ ಕಟ್ಟಬೇಕು ಎಂಬುದನ್ನು ಕರ್ವಾಲೊದಲ್ಲಿ ಮಂದಣ್ಣ ಮತ್ತು ಕರ್ವಾಲೊ ಎಂಬ ವಿಜ್ಞಾನಿಯ ಮೂಲಕ ಸಾಬೀತುಪಡಿಸುತ್ತಾರೆ.

ಕರ್ವಾಲೋ ಕಾದಂಬರಿ ಪ್ರಕಟಿಸುವ ಮುಖ್ಯವಾದ ಧೋರಣೆಯೆ ಇಡೀ ಜಗತ್ತನ್ನು ಹಾಗೂ ಬದುಕನ್ನು ಮೊದಲು ನೋಡುತ್ತಿದ್ದ ಮಾದರಿಗಳಿಂತ ಹೊರಬಂದು ಭಿನ್ನ ಮಾದರಿಯಾಗಿ ನೋಡುವುದು ಹಾಗೂ ಹೇಳುವುದಾದರೆ ತಾತ್ವಿಕವಾಗಿ, ಸಾಮಾಜಿಕವಾಗಿ ವಿಭಿನ್ನ ವಸ್ತುವನ್ನು ಒಳಗೊಳ್ಳುವುದು. ಮಂದಣ್ಣ– ಕರ್ವಾಲೊ ವೈಚಾರಿಕತೆ ಶ್ರದ್ಧೆಯ ಜಗತ್ತು, ಗ್ರಾಮ–ನಗರ ಈ ದ್ವಂದ್ವಗಳು ಪರಸ್ಪರ ಸೇರಬೇಕಾದ ಮಾದರಿಗಳನ್ನು ಕಟ್ಟಲು ಆರಂಭಿಸಿದವು. ಅನಂತಮೂರ್ತಿಯವರು ಬಳಸಿ ಮೂರ್ತ–ಅಮೂರ್ತ, ಚಿಂತನೆ–ಅನುಭವ ಇವು ಪರಸ್ಪರ ಒಂದಾಗಬೇಕು ಎಂಬ ಹಿನ್ನೆಲೆಯಲ್ಲಿ ಬ್ರಾಹ್ಮಣನ ಬದುಕು ಶೂದ್ರನ ಅನುಭವದಿಂದಲೂ ಶೂದ್ರನ ಬದುಕು ಬ್ರಾಹ್ಮಣನ ಚಿಂತನೆಯಿಂದಲೂ ಪುಷ್ಟಿ ಪಡೆಯಬೇಕು ಎನ್ನುವ ಹಂಬಲ ವ್ಯಕ್ತಪಡಿಸಿದ ಮಾದರಿಯಾಗಿತ್ತು.

ನಿರೂಪಕನ ಪ್ರಜ್ಞೆಯೊಡನೆ ಕೃತಿ ಬಿಚ್ಚಿಕೊಳ್ಳುತ್ತಾ ಹೋಗುವುದು ನಿರೂಪಕ ತನ್ನ ಸುತ್ತಲಿನ ಸಮುದಾಯದ ಬಗೆಗೆ ಎಂತಹ ನಿಲುವನ್ನು ಹೊಂದಿದ್ದ ಎಂಬುದು ತನ್ನಷ್ಟಕ್ಕೆ ವ್ಯಕ್ತವಾಗುತ್ತಾ ಹೋಗುತ್ತದೆ. ನಿರೂಪಕ ಆಧುನಿಕತೆಯ ಪ್ರತಿನಿಧಿಯಾಗಿ ಹಾಗೂ ಶಿಷ್ಟವ್ಯಕ್ತಿಯಾಗಿಯೂ ಕಾಣಿಸಿಕೊಳ್ಳುತ್ತಾನೆ. ಆರಂಭದಲ್ಲಿ ನಿರೂಪಕ ಜಗತ್ತನ್ನು ನೋಡುವ ಕ್ರಮವು ತನ್ನದೇ ದೃಷ್ಟಿಕೋನದಿಂದ ಕೂಡಿತ್ತು. ಇದು ಅನೇಕ ವಲಯಗಳನ್ನು ಆವರಿಸಿತ್ತು, ಅಲ್ಲಿನ ಜನಜೀವನದ ಬಗ್ಗೆಯಾಗಲಿ, ಜೇನಿನ ಬಗ್ಗೆಯಾಗಲಿ, ವ್ಯವಸಾಯದ ಬಗ್ಗೆಯಾಗಲಿ ಒಟ್ಟಿನಲ್ಲಿ ತನ್ನ ಸುತ್ತಲಿನ ಜಗತ್ತಿನ ಬಗ್ಗೆ ಉಪೇಕ್ಷೆ, ವ್ಯಂಗ್ಯ ಮತ್ತು ತನ್ನ ಜೀವನ ಕ್ರಮಕ್ಕಿಂತ ಅತ್ಯಂತ ಭಿನ್ನವಾದುದು ಎಂಬ ನಿಲುವೇ ಪ್ರಧಾನವಾಗಿತ್ತು. ನಿರೂಪಕನು ತನ್ನ ಸುತ್ತಲಿನವರನ್ನು ನೋಡುವ ಮಾದರಿಗಳನ್ನು ನೋಡುವುದಾದರೆ,

"ಜೇನಿನ ಬಗ್ಗೆಯಾಗಲೀ ಜೇನುಹುಳಗಳ ಬಗ್ಗೆಯಾಗಲೀ ಆಗ ನನಗೆ ಅಷ್ಟೊಂದು ತಿಳಿವಳಿಕೆ ಇರಲಿಲ್ಲ ಸ್ಥೂಲವಾಗಿ ನಾನು ಊಹಿಸಿದ್ದು ಅದು ಮಾನವನ ಮೊದಲ ಶತ್ರು, ಹಾವಿನಂತೆಯೆ ಮಾನವನನ್ನು ಕಚ್ಚಲು ಕೊಲ್ಲಲು ಯತ್ನಿಸುವ ಕೀಟ ಎಂದಷ್ಟೆ... ನಮ್ಮ ತಾಲ್ಲೂಕಿನಲ್ಲಿ ಪ್ಯಾರ ಮೊದಲ ದರ್ಜೆಯ ಅವಿವೇಕಿ ಎಂಬ ನನ್ನ ಊಹೆ ಅವನ ಮಾತಿನಿಂದ ಇನ್ನೂ ಬಲವಾಯ್ತು. ಈ ಮಂಗ ಮಂದಣ್ಣನೂ ತನ್ನ ಹೆಡ್ಡತನ ಮಂದಬುದ್ಧಿಗಳನ್ನು ಮುಚ್ಚಿಕೊಳ್ಳಲು

ತನ್ನ ಗುರು ಕರ್ವಾಲೊ ಎಂದು ಹೇಳುತ್ತಿದ್ದಾನೆಂದು ತಿಳಿದೆ."

ಈ ಮೇಲಿನ ಉದಾಹರಣೆಗಳು ನಿರೂಪಕ ತನ್ನ ಸುತ್ತಲಿನ ಪ್ರಪಂಚವನ್ನು ನೋಡುತ್ತಿದ್ದ ಕ್ರಮವನ್ನು ಹೇಳುತ್ತವೆ. ಸಂಶಯ, ಉಪೇಕ್ಷೆ, ಅವಿವೇಕ, ಮಂದಬುದ್ಧಿ, ಶತ್ರು ಇಂತಹ ಗುಣಗಳು ವ್ಯಕ್ತಿಗಳನ್ನು ಅಳೆಯಲು ಆರಿಸಿಕೊಂಡಿರುವ ಮಾನದಂಡಗಳಾಗಿರುತ್ತವೆ. ಪ್ಯಾರಾ ಅವಿವೇಕಿ ಆದರೆ ತಾನು ವಿವೇಕ್ ಎಂಬ ಧ್ವನಿಯನ್ನು ಹೊರಡಿಸುತ್ತದೆ. ಹಾಗೂ ಪ್ರತಿಯೊಂದನ್ನು ಹಣದ ದೃಷ್ಟಿಯಿಂದ ಲಾಭದ ದೃಷ್ಟಿಯಿಂದ ಸುತ್ತಲಿನ ಪರಿಸರವನ್ನು ಜನಜೀವನವನ್ನು ಅಳೆಯುವುದು, ಇದು ಕಾದಂಬರಿಯಲ್ಲಿ ನಿರೂಪಕನ ದೃಷ್ಟಿಕೋನ ಮಾತ್ರವೇ ಆಗಿರದೆ ಅಲ್ಲಿನ ಬದುಕಿನ ಪರಿಸರದ ಧೋರಣೆಯೂ ಆಗಿದೆ.

ನಿರೂಪಕನು ನಾರ್ವೆ ರಾಮಯ್ಯನ ಬಳಿ ಮಂದಣ್ಣನ ವ್ಯವಹಾರದ ಬಗ್ಗೆ ವಿಚಾರಿಸಿದಾಗ, ಅವನು "ಅಲ್ಲಾ ಸ್ವಾಮಿ ಹುಳುಹುಪ್ಪಟ್ಟೆ ಹಿಡಿದುಕೊಂಡು ಬೀದಿ ತಿರುಗುತ್ತಾ ಇದ್ದಾನೆ ಅವ, ನಿಮಗೇನೋ ಭಾಳ ಬೇಕಾದವನಿರಬಹುದು. ಆದರೆ ನಮಗೇನು ಫಾಯಿದೆ ಹೇಳಿ ಅದರಿಂದ" ಎಂದು ನಿರೂಪಕನನ್ನೇ ಪ್ರಶ್ನಿಸುತ್ತಾನೆ. ಆಗ ನಿರೂಪಕನು ರಾಮಯ್ಯನಿಗೆ, ಹುಳು ಹುಪ್ಪಟ್ಟೆ ವಿಚಾರ ತಿಳಿಯುವುದಕ್ಕೆ ಸರ್ಕಾರ ಕರ್ವಾಲೊ ಅವರಿಗೆ ತಿಂಗಳಿಗೆ ಸಾವಿರದೈನೊರು ರೂಪಾಯಿ ಸಂಬಳ ಕೊಡುತ್ತಿವೆ ಎಂದಾಗ ಅವನು ನಿಜಕ್ಕೂ ಗೊಂದಲಕ್ಕೆ ಬೀಳುತ್ತಾನೆ.

ಹೀಗೆ "ಬದುಕಿನ ಕ್ರಮವನ್ನು ಹಣದಿಂದ, ಲಾಭದಿಂದ, ಫಾಯಿದೆ ದೃಷ್ಟಿಯಿಂದಲೆ ನೋಡುತ್ತಿದ್ದುದ್ದನ್ನು ಕಾಣಿಸುತ್ತದೆ. ವ್ಯವಸಾಯ ಜೀವನ ಶೈಲಿಯಾಗಿದ್ದದ್ದು ವೃತ್ತಿಯಾಗಿ ಪರಿಗಣಿತವಾದೊಡನೆಯೆ ಎಲ್ಲವೂ ಲೆಕ್ಕಾಚಾರದ ಜಗತ್ತಾಗಿ ಪರಿವರ್ತನೆಯಾಗಿದೆ. ಕೈತುಂಬಾ ಹಣ ತಂದು ಕೊಡುವ ಕೆಲಸ ಉತ್ತಮವಾದದ್ದು ಎಂಬ ಮನೋಧರ್ಮವಿದೆ, ಬದುಕಿ ಉಳಿಯಲು ಹಣ ಮುಖ್ಯ ನಿಜ, ಪಾರಂಪರಿಕ ಜಗತ್ತು ಹಣಕ್ಕಾಗಿ ತೊಳಲಾಡುತ್ತಿರುವುದೂ ನಿಜ, ಆದರೆ ಇಲ್ಲಿನ ದೃಷ್ಟಿ ಹಣದಿಂದಲೇ ಜಗತ್ತನ್ನು ಅಳೆಯಲು ಹೊರಟಿದೆ. ಹಣ ಬರುವಂತಿದ್ದರೆ ಮಾತ್ರ ಅದರಿಂದ ಉಪಯೋಗ ಎಂಬ ಭಾವನೆಯು ಹಣದ ಬೆನ್ನೆತ್ತಿ ಅದರ ಮೂಲದಿಂದಲೇ ಬದುಕನ್ನು ಅಳೆಯುತ್ತಿರುವುದಾಗಿದೆ. ಈ ದೃಷ್ಟಿಕೋನವು ಹೊರಗಿನಿಂದ ಪ್ರೇರೇಪಿತವಾದಂತದ್ದು ಎಂದಾದರೆ ಪರಂಪರೆಯೊಳಗೆ ಮೊದಲಿನಿಂದಲೂ ಹಣಕ್ಕಾಗಿ ಬೆಲೆ ಕೊಡುವ ಧೋರಣೆ ಇರಲಿಲ್ಲವೆ ಎಂಬ ಪ್ರಶ್ನೆ ಹೇಳುತ್ತದೆ. ಹುಟ್ಟು ಸಾವು ಮದುವೆ ಇಂತಹ ಮನುಷ್ಯನ ಮೂಲಭೂತ ಅಸ್ತಿತ್ವವನ್ನೇ ಹಣದೊಡನೆ ತಳಕು ಹಾಕಿ ನೋಡುವ ದೃಷ್ಟಿಕೋನ ಈಗ ಪ್ರಧಾನ ಆಯಾಮವನ್ನು ಪಡೆದುಕೊಳ್ಳುತ್ತಿರುವಷ್ಟು ಹಿಂದೆ ಗ್ರಾಮೀಣ ಜಗತ್ತಿನಲ್ಲಿ ಇರಲಿಲ್ಲ. ಆದರೆ ಈಗ ಗ್ರಾಮೀಣ ಜಗತ್ತು ಸಹ ಅಂತಹ ನಿಲುವನ್ನು ತನ್ನೊಳಗೆ ಆ ವಾಹನೆ ಮಾಡಿಕೊಳ್ಳುತ್ತಾ ನಗರದ ಹಣದ ಜಗತ್ತನ್ನು ತನ್ನೊಳಗೆ ಮಾಡಿಕೊಳ್ಳಲು ಅವಣಿಸುತ್ತಿದೆ. ಅದರೊಳಗೆ ನಿರೂಪಕ, ಮಂದಣ್ಣ, ನಾರ್ವೆರಾಮಯ್ಯ ಇವರು ಯಾರೂ ಹೊರಯಾಗಿ ಉಳಿಯುತ್ತಿಲ್ಲ".[2]

ಹೀಗೆ ಬದುಕನ್ನು ತನ್ನದೇ ಉದ್ದೇಶಗಳಿಗೆ ಪರಿವರ್ತಿಸಿಕೊಳ್ಳಲು ಅವನಿಸುತ್ತಿರುವ ಹಂತದಲ್ಲಿ ಅವರ ಕೈಗೆ ಆಶಿಸಿದ್ದು ಸಿಗದೆ ರೇಜಿಗೆ ಕಿರಿಕಿರಿ ಅನುಭವಿಸುತ್ತಾ ಹೋಗುತ್ತಾರೆ. ಈ ಹಂತದಲ್ಲಿ ನಿರೂಪಕರಿಗೆ ಕರ್ವಾಲೋ ಪರಿಚಯವಾಗುತ್ತದೆ. ಕರ್ವಾಲು ನಿರೂಪಕರನ್ನು ಒಳಗೊಂಡಂತೆ ಅನೇಕರಿಗೆ ಸುತ್ತಲಿನ ಜಗತ್ತನ್ನು ಕಣ್ತೆರೆದು ನೋಡಲು ಕಲಿಸುತ್ತಾರೆ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ನಡೆದಿದೆ. ಸುತ್ತಲಿನ ಜಗತ್ತನ್ನು ಕಣ್ ತೆರೆದು ನೋಡುವ ಅಗತ್ಯ ಕರ್ವಾಲೋರಿಗೆ ಹೇಗೆ ಸಾಧ್ಯವಾಯಿತು ಮತ್ತು ಕರ್ವಾಲೋ ಕಣ್ತೆರೆದು ನೋಡುತ್ತಿರುವುದಾದರೂ ಏನನ್ನು ಮತ್ತು ಏಕೆ ಎಂಬ ಪ್ರಶ್ನೆಗಳು ಏಳುತ್ತವೆ.

ನಿರೂಪಕನ ಜೀವನ ದೃಷ್ಟಿಯ ಬದಲಾಗಲು ಕರ್ವಾಲೋ ಕಾರಣವಾಗುತ್ತಾರೆ. ಕರ್ವಾಲೋ ಒಬ್ಬ ಕೀಟ ವಿಜ್ಞಾನಿ. ವಿಜ್ಞಾನಿಗೆ ಜಗತ್ತು ಕುತೂಹಲದ ಆಗರ ಮತ್ತು ಅದಕ್ಕೆ ತಕ್ಕಂತೆ ಪ್ರತಿಯೊಂದು ನೋಡುವುದು ಅಧ್ಯಯನದ ಮಾದರಿಯಲ್ಲಿ. ಕರ್ವಾಲೋರ ವಿಶೇಷವೆಂದರೆ ತಮ್ಮ ಅಧ್ಯಯನಕ್ಕೆ ಮಾನವೀಯ ಅಂಶ ಸೇರಿಸಿ ಅದನ್ನು ಜೀವಂತಗೊಳಿಸುವುದು ಈ ದೃಷ್ಟಿ ಜಗತ್ತನ್ನು ನೋಡುವಲ್ಲಿಯೂ ಪ್ರಭಾವ ಬೀರುತ್ತದೆ. ಪ್ರಭಾವದ ಬಲೆಯಕ್ಕೆ ನಿರೂಪಕನೂ ಸೇರುತ್ತಾನೆ.

ವಿಜ್ಞಾನಿಯಾದ ಕರ್ವಾಲೊರ ಶುದ್ದ ಜ್ಞಾನದ ಮಾದರಿಯ ಹೊರತು ಜ್ಞಾನವನ್ನು ವ್ಯಾಪಾರೀಕರಣಗೊಳಿಸುವ ಆಲೋಚನೆಯದ್ದಲ್ಲ ಶುದ್ಧ ಜ್ಞಾನವು ವ್ಯಾಪಾರೀಕರಣಗೊಳ್ಳದ ಹಂತದಲ್ಲಿ ತನ್ನೊಡನೆ ಮಾನವೀಯತೆಯನ್ನು ಒಳಗೊಂಡಿರುವಂತದ್ದು. ಹೀಗಾಗಿ ಸ್ಥಳೀಯ ಚೈತನ್ಯದ ಅನ್ವೇಷಣೆಯ ಹಿಂದೆ ಜ್ಞಾನವನ್ನು ತನ್ನ ಅನುಕೂಲಕ್ಕಾಗಿ ಬಳಸಿಕೊಳ್ಳುವ ಇರಾದೆಗಿಂತ ಅನ್ವೇಷಣೆಯ ಬಗೆಗಿನ ಪ್ರೀತಿಯೂ ಮುಖ್ಯವಾಗುತ್ತದೆ. ಈ ಜೀವನ ಪ್ರೀತಿಯು ತನ್ನದ್ದು ಪರರದ್ದು ಎಂಬ ಧೋರಣೆಗೆ ಹೊರತಾಗಿರುತ್ತದೆ. ಹೀಗಾಗಿ ಕರ್ವಾಲೋ ಹೊರಗಿನಿಂದ ಬಂದು ಪರಿಸರವನ್ನು ಪಾರಂಪರಿಕ ಸಮಾಜವನ್ನು ವಿಶಿಷ್ಟ ಬಗೆಯಿಂದ ನೋಡಿದರು ಅದನ್ನು ಅರ್ಥೈಸಿಕೊಳ್ಳುವ ಕ್ರಿಯೆಯಲ್ಲಿ ಹೊರಗಿನವರಾಗದೆ ಮಾನವೀಯ ಸಂವೇದನೆ ಎಂಬ ಸಾಮಾನ್ಯೀಕೃತಗೊಂಡ ನೆಲೆಯಲ್ಲಿ ಸರ್ವಕಾಲಿಕವಾಗಿ ದೇಶ ಕಾಲಾತೀತವಾಗಿ ನಿಲ್ಲುತ್ತಾರೆ

ಒಂದು ಪಾರಂಪರಿಕ ಸಮಾಜವನ್ನು ನೋಡುವ ದೃಷ್ಟಿಯು ತನ್ನ ಸಂಕುಚಿತತೆಯನ್ನು ಕಳಚಿಕೊಂಡು, ಇರುವ ಕ್ರಮದೊಳಗೆ ಕಟ್ಟುವ ಸಾಧ್ಯತೆಗಳ ಅನ್ವೇಷಣೆಯನ್ನು ಆರಂಭಿಸಿತು. ಇಂತಹ ಆರೋಗ್ಯಕಾರಿ ಬೆಳವಣಿಗೆಯನ್ನು ತನ್ನೊಳಗೆ ರೂಪಿಸಿಕೊಳ್ಳುತ್ತಾ, ತನ್ನಿಂದ, ತನ್ನ ಆಲೋಚನೆಗಳಿಂದ, ಇದುವರೆಗಿನ ಬದುಕಿನ ಮಾದರಿಗಳಿಂದ ಹೊರಬಂದು ಸಹನೆ, ತಾಳ್ಮೆಯ ದೃಷ್ಟಿ ಬೆಳಸಿಕೊಂಡದ್ದು ಗಮನಾರ್ಹ ಬೆಳವಣಿಗೆಯಾಯಿತು. ಕರ್ವಾಲೋರಿಂದ ಕಲಿತ ಕಣ್ತೆರೆದು ನೋಡುವ ಕ್ರಿಯೆಯು ತನ್ನೊಡನೆ ಸಹನೆಯ ಅಂಶವನ್ನು ಒಳಗೊಂಡು ವಿಭಿನ್ನ ಆಯಾಮದತ್ತ ಬೆಳೆಸಿತು.

ಇದರಲ್ಲಿ ಮೊದಲನೆಯ ಅಂಶವು ತನ್ನ ಸುತ್ತಲಿನ ಜನ, ಪರಿಸರದ ಬಗೆಗಿನ ಉಪೇಕ್ಷ ಕಡಿಮೆಯಾಗಿ ಆ ಜಾಗದಲ್ಲಿ ಕುತೂಹಲ ಜೀವನ ಪ್ರೀತಿ ಬೆಳೆದಿದ್ದು. ಈ ದೃಷ್ಟಿಯು "ಕರ್ವಲೋನಂತಹವನೊಬ್ಬ ಹಾವುಗೊಲ್ಲರ ಎಂಕ್ಟ, ಕರಿಯಪ್ಪನಂತರಲ್ಲಿಯೂ ಒದಗಿರುವ ಪ್ರತಿಭೆ, ಜ್ಞಾನಗಳನ್ನು ಸರಿಯಾದ ರೀತಿಯಲ್ಲಿ ಬಳಸುವುದಾದರೆ ಅದೊಂದು ಅದ್ಭುತ ಪ್ರಪಂಚವೇ ತೆರೆದಿತು ಎಂಬ ಧ್ವನಿಯನ್ನು ತೇಜಸ್ವಿ ಮೇಲು ಧ್ವನಿಯಲ್ಲಿ ನುಡಿಸುವಂತಿದೆ" ಹಾವುಗೊಲ್ಲರ ಎಂಕ್ಟ, ಕರಿಯಪ್ಪ, ಮಂದಣ್ಣ ಇಂತಹ ಅವಿವೇಕಿ, ದಡ್ಡ ಜನಗಳಲ್ಲಿಯೂ ಅವರದೇ ಆದ ಒಂದು ವ್ಯಕ್ತಿತ್ವದ ವಿಶಿಷ್ಟತೆ ಇದೆ ಎಂದು ದೃಷ್ಟಿಯ ವೈಶಾಲ್ಯತೆಯು ಪರಂಪರೆ ತನ್ನ ಬದುಕಿನ ಶೈಲಿಯಲ್ಲಿ ಎಷ್ಟೊಂದು ಅವೈಜ್ಞಾನಿಕತೆಯನ್ನು ಒಳಗೊಂಡಿದ್ದರು ಅದಕ್ಕೂ ತನ್ನದೆ ಆದ ಕ್ರಮವೊಂದಿದೆ ಎಂದು ಕಣ್ಣು ಬಿಟ್ಟು ನೋಡುವ ಕಡೆಗೆ ವಿಸ್ತರಿಸಿಕೊಂಡಿತು.

ಕರ್ವಾಲೋನಂತೆ ಅಧ್ಯಯನದ ಮಾದರಿಯೊಳಗೆ ಸುತ್ತಲಿನ ಜಗತ್ತಿನ ತಿಳುವಳಿಕೆಯನ್ನು ಅರಿವಾಗಿ ಗುರುತಿಸಿಕೊಂಡಿಲ್ಲದೆ ಇರಬಹುದು. ಆದರೆ ತನ್ನದೆ ಆದ ಕ್ರಮದಲ್ಲಿ ಮಂದಣ್ಣ ಪರಿಸರವನ್ನು ಸೂಕ್ಷ್ಮವಾಗಿ ಗಮನಿಸಿದ್ದಾನೆ. ಆದರೆ ಅವನಿಗೆ ಅದೊಂದು ವಿಶೇಷವಾದದ್ದಲ್ಲ. ಕಾರಣ, ಅವನಿಗೆ ಅದು ತನ್ನ ಬದುಕಿನ ಶೈಲಿಯ ಒಂದು ಭಾಗವಾಗಿದೆ. ಅದರ ಅರಿವೇ ಅವನಿಗೆ ಇಲ್ಲ. ಜಗತ್ತೆ ಬೆಚ್ಚಿ ಬೀಳುವ ಹಾರುವ ಓದಿ ನೋಡಿದ್ದರೂ ಅದರ ವಿಶೇಷತೆ ಅವನಿಗೆ ತಿಳಿದಿಲ್ಲ. ಹೀಗೆ ದೇಶಿ ಅನುಭವದ (ಜ್ಞಾನದ) ಮಹತ್ವ ಅವರಿಗೆ ತಿಳಿದಿಲ್ಲಾ, ಆ ಜ್ಞಾನದ ಮಹತ್ವವನ್ನು ಗುರುತಿಸಿ ಸಮಾಜಕ್ಕೆ ಹಾಗೂ ಸಾಹಿತ್ಯಕ್ಕೆ ಪರಿಚಯಿಸುವ ಕೆಲಸವನ್ನು ಇನ್ನು ಮಾಡಬೇಕಾಗಿದೆ.

ಜಿ. ಎಚ್. ನಾಯಕರು ಹೇಳುವಂತೆ "ಇಂತವರಲ್ಲಿ ಹುದುಗಿರುವ ಅಪಾರ ಜ್ಞಾನವನ್ನು ಸರಿಯಾದ ಕ್ರಮದಲ್ಲಿ ಬಳಸುವುದಾದರೆ ಅದ್ಭುತ ಪ್ರಪಂಚವೇ ತೆರೆಯುತ್ತದೆ. ಅದಕ್ಕೆ ಮಿಗಿಲಾಗಿ ಇಂತಹ ಜ್ಞಾನವನ್ನು ತಮ್ಮೊಳಗೆ ತಮಗೆ ಅರಿಯದಂತೆ ಹುದುಗಿಸಿಕೊಂಡು ಗುಪ್ತಗಾಮಿನಿಯಾಗಿ ಬದುಕುತ್ತಿರುವ ವ್ಯಕ್ತಿತ್ವಗಳ ಶೋಧವೇ ಇನ್ನೂ ರೋಮಾಂಚನಕಾರಿಯಾದದ್ದು. ಆಗ ಪ್ರತಿಯೊಂದು ವ್ಯಕ್ತಿತ್ವ ವ್ಯಕ್ತಿತ್ವಗಳನ್ನು ವಿಭಿನ್ನ ನೆಲೆಗಳಲ್ಲಿ ಅರ್ಥೈಸಿಕೊಳ್ಳುವ ಸಾಧ್ಯತೆಯನ್ನು ತೆರೆಸುವುದೇ ಜಗತ್ತನ್ನು ಇನ್ನು ಅನೇಕ ಆಯಾಮಗಳಿಂದ ಅರಿಯಲು ಅವಕಾಶ ಒದಗಿಸುತ್ತದೆ. ಪ್ರತಿಯೊಂದು ಆಗ ತನ್ನ ವಿಶಿಷ್ಟತೆಯ ಛಾಪಿನಿಂದಲೇ

ಗುರ್ತಿಸಿಕೊಳ್ಳುತ್ತದೆ". ಹೀಗೆ ಆಲೋಚನೆಯ ಕರ್ವಾಲೋ ಮತ್ತು ಅನುಭವದ ಮಂದಣ್ಣ ಸೇರಿದಾಗಲೇ ಒಂದು ವಿಶೇಷವಾದ ಜ್ಞಾನಶಾಖೆ ಉದಯವಾಗುವುದು. ಅದರು ಕಾದಂಬರಿಯನ್ನು ನೋಡಿದಾಗ ಜಾನಪದವನ್ನು ಶಿಷ್ಟವು ತನ್ನ ಪ್ರಜ್ಞೆಗೆ ಸೇರಿಸಿಕೊಳ್ಳುವಷ್ಟು ಸುಲಭವಾಗಿ, ಶಿಷ್ಟವನ್ನು ಜಾನಪದ ಒಳಗೊಳ್ಳಲಾರದು ಎಂಬುದು ಕರ್ವಾಲೋವಿನಲ್ಲಿ ಅರಿವಿಗೆ ಬರುತ್ತದೆ.

**ಕೊನೆ ಟಿಪ್ಪಣಿ**

1. ಯು. ಆರ್ ಅನಂತಮೂರ್ತಿ, ಪ್ರಜ್ಞೆ ಮತ್ತು ಪರಿಸರ, ಪುಟ–51, 2014
2. ಎಚ್ ಶಶಿಕಲಾ,ಏಕ–ಅನೇಕ, ಪುಟ–209, 2005

**ಆಕರಗಳು**


1. ನಾಯಕ.ಜಿ.ಎಚ್, 2011, ಮೌಲ್ಯಮಾರ್ಗ ಸಂಪುಟ 1, ಸಿರಿವರ ಪ್ರಕಾಶನ, ಬೆಂಗಳೂರು.
2. ಪೂರ್ಣಚಂದ್ರ ತೇಜಸ್ವಿ ಕೆ. ಪಿ., 2016, ಕರ್ವಾಲೊ, ಪುಸ್ತಕ ಪ್ರಕಾಶನ, ಮೈಸೂರು.
3. ನಾರಾಯಣ ಕೆ. ವಿ., 2016, ತೊಂಡುಮೇವು–3, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.